**ಪಾಠ–13** **ಮಾರ್ಚ್ 23–29**

# "ನಾನು ಎಲ್ಲವನ್ನು ಹೊಸದು ಮಾಡುತ್ತೇನೆ"



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಪ್ರಕ 19:6–9; ಯೋಹಾನ 14:1–3, ಪ್ರಕ 19:11–16, ಪ್ರಕ 20:1–3, ಯೆರೆ 4:23–26, ಪ್ರಕ 20:4–6, ಪ್ರಕ 21:2–8.

**ಸ್ಮರಣವಾಕ್ಯ : "ಆಗ ಸಿಂಹಾಸನದ ಮೇಲೆ ಕೂತಿದ್ದವನು– ಇಗೋ, ಎಲ್ಲವನ್ನು ಹೊಸದು ಮಾಡುತ್ತೇನೆ ಅಂದನು. ಒಬ್ಬನು ನನಗೆ– ಇದನ್ನು ಬರೆ; ಈ ಮಾತುಗಳು ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿವೆ ಎಂದು ಹೇಳಿದನು" (ಪ್ರಕ 21:5).**

ಅಂತ್ಯಕಾಲದ ಬ್ಯಾಬಿಲೋನಿನ ನಾಶನದ ಸುದ್ದಿಯು ಭ್ರಷ್ಟ ಧಾರ್ಮಿಕ ವ್ಯವಸ್ಥೆಯ ಸಹಭಾಗಿಗಳಾಗಿರುವವರಿಗೆ ಕೆಟ್ಟ ಸುದ್ದಿಯಾಗಿರುತ್ತದೆ. ಆದರೆ ದೇವಜನರಿಗೆ ಇದು ಒಳ್ಳೆ ಸುದ್ದಿಯಾಗಿದೆ (ಪ್ರಕ 19:1–7). ಬ್ಯಾಬಿಲೋನು ದೇವಜನರನ್ನು ಹಿಂಸೆ ಪಡಿಸಲು ಮತ್ತು ಅವರಿಗೆ ಕೇಡು ಮಾಡಲು ರಾಜಕೀಯ ಶಕ್ತಿಗಳನ್ನು ಪ್ರೇರಿಸುತ್ತದೆ (ಪ್ರಕ 18:24). ದೇವರ ದೊಡ್ಡ ಪ್ರತಿರೋಧಿಯ ನಾಶನವು ಆತನ ನಂಬಿಗಸ್ತ ಜನರ ವಿಮೋಚನೆಯಾ ರಕ್ಷಣೆಯಾಗಿದೆ.

ಬ್ಯಾಬಿಲೋನಿನ ನಾಶನದೊಂದಿಗೆ ಐದನೆಯ ಮುದ್ರೆಯ ದೃಶ್ಯದಲ್ಲಿರುವ ದೇವಜನರ ಪ್ರಾರ್ಥನೆಗೆ ಅಂತಿಮವಾಗಿ ಉತ್ತರ ಸಿಗುತ್ತದೆ. "ಇನ್ನೆಷ್ಟು ಕಾಲದವರೆಗೆ, ಓ ಕರ್ತನೇ?' (ಪ್ರಕ 6:10) ಎಂಬ ಕೂಗು ಹೇಬೇಲಿನ ಕಾಲದಿಂದ ಅಂತಿಮವಾಗಿ ಅವರನ್ನು ಎತ್ತಿ ಹಿಡಿದ ಕಾಲದವರೆಗಿನ ಕುಗ್ಗಿ ಹೋದವರ ಮತ್ತು ಬಾಧೆ

ಪಡುತ್ತಿರುವವರ ಕೂಗನ್ನು ಪ್ರತಿನಿಧಿಸುತ್ತದೆ (ಕೀರ್ತ 79:5), (ದಾನಿಯ 12:6 ಮತ್ತು 7).

ಪ್ರಕಟನೆ ಪುಸ್ತಕವು ದೇವಜನರಿಗೆ ಆಗುವ ಕೇಡು, ಹಿಂಸೆ ಬಾಧೆ ಕೊನೆಗೊಳ್ಳುತ್ತದೆ ಎಂಬುದಾಗಿ ಭರವಸೆ ಕೊಡುತ್ತದೆ. ಇದು ಯೇಸುಕ್ರಿಸ್ತನು ತನ್ನ ನಿತ್ಯ ರಾಜ್ಯಕ್ಕೆ ತನ್ನ ಜನರನ್ನು ಕರೆದುಕೊಂಡು ಹೋಗುವ ಸಮಯವಾಗಿದೆ. ಪ್ರಕಟನೆ ಪುಸ್ತಕದ ಇನ್ನುಳಿದ ಅಧ್ಯಾಯಗಳು ಕೇವಲ ಬ್ಯಾಬಿಲೋನಿನ ನಾಶನವನ್ನು ಮಾತ್ರ ಹೇಳದೆ ಸೈತಾನನ ಮತ್ತು ಕೆಟ್ಟದ್ದರ ನಾಶನವನ್ನು ಸಹಾ ಹೇಳುತ್ತದೆ. ದೇವರ ರಾಜ್ಯದ ಸ್ಥಾಪನೆಯ ಕಿರುನೋಟವೂ ನಮಗೆ ಸಿಗುತ್ತದೆ. ಈ ವಾರದ ಪಾಠವನ್ನು ಮಾರ್ಚ್ 30 ರ ಸಬ್ಬತ್ತಿಗೆ ಅಧ್ಯಯನ ಮಾಡಿರಿ.

**ಭಾನುವಾರ** **ಮಾರ್ಚ್ 24**

## ಯಜ್ಞದ ಕುರಿಯಾದಾತನ ವಿವಾಹದ ಔತಣ

ಪ್ರಕಟನೆ 19:6–9ನ್ನು ಯೋಹಾನ 14:1–3ರ ಜೊತೆ ಓದಿರಿ. ಯೇಸುಕ್ರಿಸ್ತನು ಮತ್ತು ಅವರ ಜನರು ಒಂದಾಗುವುದಕ್ಕೆ ದೀರ್ಘಕಾಲದಿಂದ ಕಾದುಕೊಂಡಿದ್ದನ್ನು ವಿವಾಹದ ಔತಣವು ಹೇಗೆ ಸಮಂಜಸವಾಗಿ ವಿವರಿಸುತ್ತದೆ?

ಎರಡು ಸಾವಿರ ವರುಷಗಳ ಹಿಂದೆ ಯೇಸುಕ್ರಿಸ್ತನು ಪರಲೋಕವನ್ನು ಬಿಟ್ಟು ಅವನ ವಿವಾಹದ ನಂತರ ನಡೆಯುವ ಔತಣಕ್ಕೆ ತನ್ನ ಜನರನ್ನು ಆಹ್ವಾನಿಸಲು ಇಲ್ಲಿಗೆ ಬಂದನು (ಮತ್ತಾಯ 22:1–14). ಯೇಸುವು ತನ್ನ ರಾಜ್ಯವನ್ನು ಪರಿಗ್ರಹಿಸುವುದನ್ನು ವಿವಾಹವು ಪ್ರತಿಬಿಂಬಿಸುತ್ತದೆ. ಪ್ರಕಟನೆಯ ಪುಸ್ತಕದಲ್ಲಿ ದೇವಜನರನ್ನು ಮದುವೆಯ ಔತಣಕ್ಕೆ ಬಂದ ಅತಿಥಿಗಳು ಎಂದು ಕರೆಯುತ್ತದೆ (ಪ್ರಕ 19:9). ಆದರೆ ಕರೆಸಿಕೊಂಡವರು ಅತಿಥಿಗಳಾದರೆ ಅವರೇ ಮಲಗಿತ್ತಿಯನ್ನು ಸಹಾ ಪ್ರತಿನಿಧಿಸಲು ಸಾಧ್ಯವಾಗುವುದಿಲ್ಲ. ಮತ್ತಾಯ 22ನೇ ಅಧ್ಯಯನದಲ್ಲಿರುವ ದೃಷ್ಟಾಂತವು (ಸಾಮ್ಯವು) ವಿವಾಹದ ಚಿತ್ರವನ್ನು ಪರಿಚಯಿಸುತ್ತದೆ. ವಿಚಾರಣೆ ಯುಕ್ತ ನ್ಯಾಯತೀರ್ಪು ವಿವಾಹಕ್ಕೆ ಮೊದಲು ನಡೆಯುವ ಘಟನೆಯನ್ನು ಸ್ಪಷ್ಟವಾಗಿ ಪ್ರತಿನಿಧಿಸುತ್ತದೆ. ಪರಿಶುದ್ಧ ಪಟ್ಟಣವಾದ ಹೊಸ ಯೆರುಸಲೇಮನ್ನು 'ಮದಲಗಿತ್ತಿ', ಯಜ್ಞದ ಕುರಿಯ ಹೆಂಡತಿ ಎಂದು ಕರೆಯಲಾಗಿದೆ. ಮದುವೆಗೆ

ಮೊದಲು ರಾಜನು ಅತಿಥಿಗಳು ಮದುವೆಯ ಬಟ್ಟೆಯನ್ನು ಕೊಟ್ಟಿ ಕೊಂಡಿದ್ದಾರೆಯೇ ಎಂದು ಪರೀಕ್ಷಿಸಲು ಬಂದನು. ಮದುವೆ ಬಟ್ಟೆ ಎಂದರೆ ಯಜ್ಞದ ಕುರಿಯಾದಾತನ ರಕ್ತದಿಂದ ತೊಳೆಯಲ್ಪಟ್ಟು ಬೆಳ್ಳಗಿರುವ ಕಲೆ ರಹಿತವಾದ ನಮ್ಮ ಗುಣಸ್ವಭಾವವೆಂಬ ಉಡುಪಾಗಿದೆ. ಮತ್ತಾಯ 22:11, ಪ್ರಕ 7:14 – ಇ.ಜಿ. ವೈಟ್ ಮಹಾಹೋರಾಟ ಪುಟ 426–428. ಮದಲಿಂಗನ ಮರಣ ಮತ್ತು ಪುನರುತ್ಥಾನವಾದ ನಂತರ ತನ್ನ ಜನರಿಗೋಸ್ಕರ ಸ್ಥಳವನ್ನು ಸಿದ್ಧ ಮಾಡುವುದಕ್ಕೆ ತನ್ನ ತಂದೆಯ ಮನೆಗೆ ಹಿಂದಿರುಗುತ್ತಾನೆ (ಯೋಹಾನ 14:1–3). ಅವರು ಆತನ ಪುನರಾಗಮನಕ್ಕೆ ಸಿದ್ಧತೆ ಮಾಡಲು ಭೂಮಿಯಲ್ಲಿ ಉಳಿದಿರುತ್ತಾರೆ. ಲೋಕವು ಅಂತ್ಯವಾದಾಗ ಆತನು ಅವರನ್ನು ತನ್ನ ತಂದೆಯ ಮನೆಗೆ ಕರೆದುಕೊಂಡು ಹೋಗಲು ಹಿಂದಿರುಗಿ ಬರುತ್ತಾನೆ.

ಪ್ರಕಟನೆ 19:8 ನಯವಾದ, ನಿರ್ಮಲವಾದ ನಾರುಮಡಿಯನ್ನು ಕ್ರಿಸ್ತನು ಮದಲಗಿತ್ತಿಗೆ ಕೊಟ್ಟನೆಂದು ಹೇಳುತ್ತದೆ. ಈ ವಿವಾಹದ ವಸ್ತ್ರವು ನಗರವನ್ನು ಪ್ರವೇಶಿಸಿದ ವಿವಾಹ ಅತಿಥಿಗಳಿಗೆ ಕೊಡುವಾಗ ಅವರ ಪುಣ್ಯಗಳನ್ನು ಸಮರ್ಪಿಸುವುದಿಲ್ಲ. ಪರಿಶುದ್ಧವು ನಿರ್ಮಲವೂ ಆದ ನಾರಿನ ಮಡಿಯು ದೇವಜನರು ಕ್ರಿಸ್ತನಲ್ಲಿ ಒಂದಾಗಿ ಆತನಲ್ಲಿ ಜೀವಿಸುವುದರ ಪ್ರತಿಫಲವಾಗಿ ಬಂದ ನೀತಿ ಕೃತ್ಯಗಳನ್ನು ಪ್ರತಿನಿಧಿಸುತ್ತದೆ. ಹಾಗಾಗಿ ಈ ವಸ್ತ್ರವು ಆತನ ಜನರು ದೇವರ ಆಜ್ಞೆಗಳನ್ನೂ ಯೇಸುವಿನ ಮೇಲಿನ ನಂಬಿಕೆಯನ್ನೂ ಕೈಕೊಂಡು ನಡೆಯುತ್ತಿರುವ ಜನರ ನೀತಿವಂತಿಕೆಯನ್ನು ಸಂಕೇತಿಸುತ್ತದೆ (ಪ್ರಕ 14:12). ಯೇಸುಕ್ರಿಸ್ತನು ಭೂಮಿಯಲ್ಲಿರುವಾಗ ವಿವಾಹದ ಬಗ್ಗೆ ಒಂದು ದೃಷ್ಟಾಂತವನ್ನು ಹೇಳಿದನು. ಆ ವಿವಾಹಕ್ಕೆ ಬಂದವರಲ್ಲಿ ಒಬ್ಬನು ರಾಜನು ಕೊಟ್ಟ ಮದುವೆಯ ಬಟ್ಟೆಯನ್ನು ಧರಿಸಿಕೊಳ್ಳದೆ ತನ್ನದೇ ಬಟ್ಟೆಗೆ ಆದ್ಯತೆ ಕೊಟ್ಟನು. ಆದ್ದರಿಂದ ಅವನು ವಿವಾಹದಿಂದ ಹೊರಕ್ಕೆ ಹಾಕಲ್ಪಟ್ಟನು (ಮತ್ತಾಯ 22:1–14). ಕ್ರಿಸ್ತನ ನೀತಿಯ ವಸ್ತ್ರವು ನಂಬಿಕೆ ಮತ್ತು ಪ್ರೀತಿಯ ಚಿನ್ನವು, ಪವಿತ್ರಾತ್ಮನ ಕಣ್ಣಿಗೆ ಅಂಜನವು ಕಡೆಯ ಕಾಲದಲ್ಲಿರುವ ದೇವಜನರಿಗೆ ಅತ್ಯಗತ್ಯವಾಗಿರುವುದನ್ನು ಪ್ರಕ 3:18 ಹೇಳುತ್ತದೆ. ಯೇಸುಕ್ರಿಸ್ತನು ತನ್ನ ಜನರನ್ನು ಈ ವರಗಳನ್ನು ತನ್ನಿಂದ ಕೊಂಡುಕೊಳ್ಳಬೇಕೆಂದು ಹೇಳುತ್ತಾನೆ. ಅದಕ್ಕಾಗಿ ಕ್ರಿಸ್ತನು ನಮ್ಮಿಂದ

ವಿನಿಮಯವನ್ನು ಬಯಸುತ್ತಾನೆ. ಅಂದರೆ ನಾವು ನಮ್ಮ ಮೇಲೆ ಅವಲಂಬಿಸಿ ಕೊಳ್ಳುವುದನ್ನು ಮತ್ತು ಭರವಸೆ ಇಡುವದನ್ನು ಬಿಟ್ಟು ನಮ್ಮ ರಕ್ಷಣೆಯ ಒಂದೇ ನಿರೀಕ್ಷೆಯಾಗಿ ಯೇಸುಕ್ರಿಸ್ತನಲ್ಲಿ ನಮ್ಮ ಭರವಸೆಯನ್ನು ಇಟ್ಟು ಪ್ರಾಮಾಣಿಕವಾದ ವಿಧೇಯತೆಯನ್ನು ವಿನಿಮಯ ಮಾಡಿಕೊಳ್ಳಬೇಕಾಗಿದೆ. ನಾವು ನಮ್ಮ ಕ್ರಿಯೆಗಳಿಂದ ರಕ್ಷಿಸಲ್ಪಡುವುದಿಲ್ಲ. ಆದರೆ ನಾವು ಜೀವಿಸುತ್ತಿರುವ ಜೀವನವನ್ನು ವಿವರಿಸುವುದಕ್ಕೆ ಎಂತಹ ನೀತಿ ಕೃತ್ಯಗಳನ್ನು ಮಾಡುವವರಾಗಿದ್ದೇವೆ?

**ಸೋಮವಾರ** **ಮಾರ್ಚ್ 25**

## ಆರ್ಮೆಗಡಾನಿನ ಅಂತ್ಯ

ಪ್ರಕ 19:11–16ನ್ನು ಓದಿರಿ. ಬಿಳಿ ಕುದುರೆಯ ಮೇಲೆ ಕುಳಿತಿರುವವನ ಹೆಸರೇನು ಮತ್ತು ಅವನ ಬಾಯಿಂದ ಹದವಾದ ಖಡ್ಗ ಬರುತ್ತದೆ ಎಂದರೆ ಏನು ಅರ್ಥ? ನಾವು ಅಂತ್ಯದಲ್ಲಿ ಜಯ ಹೊಂದುವವರ ಪಕ್ಷದಲ್ಲಿ ಇರುವುದು ಹೇಗೆ?

ಯೇಸುಕ್ರಿಸ್ತನ ಬರೋಣದ ಮತ್ತು ಎಲ್ಲಾ ಯುಗಗಳ ವಿಶ್ವಾಸಿಗಳು ನಂಬುವ ವಾಗ್ದಾನಗಳು ನೆರವೇರುವುದನ್ನು ನಾವು ಇಲ್ಲಿ ನೋಡುತ್ತೇವೆ. ಯೇಸುಕ್ರಿಸ್ತನಂತೆ ಆತನ ಜನರು ತಮ್ಮ ನಂಬಿಕೆಯನ್ನು ದೇವರ ವಾಕ್ಯದ ಮೇಲೆ ಇಡುತ್ತಾರೆ (ಪ್ರಕ 19:11–6) ಯೇಸುವಿನ ಅನೇಕ ವಿಜಯಗಳ ಅಂತ್ಯವಾಗಿದೆ. ಯೇಸುವು ಸೈತಾನನನ್ನು ಪರಲೋಕದಲ್ಲಿ ಸೋಲಿಸಿದನು. ಅರಣ್ಯದಲ್ಲಿ ಸೋಲಿಸಿದನು, ಶಿಲುಬೆಯ ಮೇಲೆ ಸೋಲಿಸಿದನು ಹಾಗೆಯೇ ಆತನು ಹಿಂದಿರುಗಿ ಬಂದಾಗಲೂ ಸೈತಾನನನ್ನು ಸೋಲಿಸುತ್ತಾನೆ.

ಪೂರ್ವದಲ್ಲಿ ಒಂದು ಕಪ್ಪು ಮೋಡವು ಮನುಷ್ಯನ ಕೈಯ ಅರ್ಧದಷ್ಟು ಗಾತ್ರದಲ್ಲಿರುತ್ತದೆ. ಅದು ರಕ್ಷಕನ ಸುತ್ತ ಕವಿಯುವ ಮೋಡವಾಗಿರುತ್ತದೆ. ಅದರ ಸುತ್ತ ಕತ್ತಲು ಕವಿದಿರುವಂತೆ ಕಾಣುತ್ತದೆ. ದೇವಜನರು ಇದನ್ನು ಮನುಷ್ಯಕುಮಾರ ಗುರುತೆಂದು ತಿಳಿದಿರುತ್ತಾರೆ. ಅವರು ಆ ಮೋಡವು ಹೆಚ್ಚು ಪ್ರಭಾವದಿಂದ ಪ್ರಕಾಶಮಾನವಾಗಿ ದೊಡ್ಡದಾಗುವುದನ್ನು ಅದರ ತಳವು ದಹಿಸುವ ಅಗ್ನಿಯಂತೆ

ಪ್ರಭೆಯುಳ್ಳದ್ದಾಗಿ ಹತ್ತಿರ ಹತ್ತಿರ ಬರುವುದನ್ನು ಗಂಭೀರವಾಗಿಯೂ ಮೌನವಾಗಿಯೂ ದಿಟ್ಟಿಸಿ ನೋಡುತ್ತಾರೆ. ಅದರ ಮೇಲೆ ಒಡಂಬಡಿಕೆಯ ಮುಗಿಲು ಬಿಲ್ಲು ಇರುತ್ತದೆ. ಈವಾಗ ಕ್ರಿಸ್ತನು ದುಃಖ ತುಂಬಿದ ಮನುಷ್ಯನಾಗಿ ಅಪಮಾನವೂ ದುಃಖವೂ ತುಂಬಿರುವ ಪಾತ್ರೆಯನ್ನು ಕುಡಿಯುವವನಾಗಿ ಬರುತ್ತಿಲ್ಲ. ಆದರೆ ಜಯಶಾಲಿಯಾಗಿ ಸತ್ತವರಿಗೂ ಬದುಕಿರುವವರಿಗೂ ನ್ಯಾಯತೀರ್ಪು ಕೊಡಲು ಬರುತ್ತಾನೆ. ಆತನು ನಂಬಿಗಸ್ತನೂ ಸತ್ಯವಂತನೂ ಆಗಿರುವುದರಿಂದ ನೀತಿಯಿಂದ ನ್ಯಾಯ ವಿಚಾರಿಸುತ್ತಾನೆ. ನೀತಿಯಿಂದ ಯುದ್ಧ ಮಾಡುತ್ತಾನೆ.

ಪರಲೋಕ ಸೈನ್ಯವು ಅವನನ್ನು ಹಿಂಬಾಲಿಸುತ್ತದೆ (ಪ್ರಕ 19:11,14). ಅಸಂಖ್ಯ ಪರಿಶುದ್ಧ ದೂತರು ಮಾರ್ಗದಲ್ಲಿ ಸೇವಿಸುತ್ತಿರುತ್ತಾರೆ. ಲಕ್ಷೋಪಲಕ್ಷ ಸಾವಿರ ಸಾವಿರ ಹೊಳೆಯುವ ರೂಪಗಳು ಆಕಾಶವನ್ನು ತುಂಬಿಕೊಂಡಂತೆ ಕಾಣಿಸುತ್ತದೆ. "ಯಾವ ಮಾನವ ಲೇಖನಿಯೂ ಈ ದೃಶ್ಯವನ್ನು ವರ್ಣನೆ ಮಾಡಲಾರದುಯಾವ ಮರ್ತ್ಯನೂ (ಮರಣ ಹೊಂದುವ ಮನುಷ್ಯ) ತನ್ನ ಬುದ್ಧಿಯಿಂದ ಈ ಭವ್ಯತೆಯನ್ನು ಊಹಿಸಿಕೊಳ್ಳಲಾರನು. ಇ.ಜಿ. ವೈಟ್‌ರವರ 'ಮಹಾಹೋರಾಟ' ಪುಸ್ತಕದಲ್ಲಿ ಪುಟ 640, 641 2 ಥೆಸ 1:8–10 ರಲ್ಲಿ ಪೌಲನು ಕ್ರಿಸ್ತನ ಎರಡನೇ ಬರೋಣದ ಅಂತಿಮ ವಿಜಯದ ಮತ್ತೊಂದು ಚಿತ್ರಣವನ್ನು ಕೊಡುತ್ತಾನೆ. ಆವಾಗ ಅವನ ವಿರೋಧವಾಗಿ ಪಿತೂರಿ ಮಾಡಿದ ಎಲ್ಲಾ ಲೌಕಿಕ ಮತ್ತು ಧಾರ್ಮಿಕ ಶಕ್ತಿಗಳು ನಾಶವಾಗುತ್ತವೆ ಮತ್ತು ಅವನ ಜನರು ಶಾಶ್ವತವಾಗಿ ವಿಮೋಚನೆಗೊಳ್ಳುತ್ತಾರೆ. ಪ್ರಕಟನೆ 19ನೇ ಅಧ್ಯಾಯದಲ್ಲಿ ಎರಡು ಔತಣಗಳನ್ನು ನೋಡುತ್ತೇವೆ. ಒಂದು 9ನೇ ವಚನದಲ್ಲಿದೆ ಇನ್ನೊಂದು 17 ಮತ್ತು 18ನೇ ವಚನಗಳಲ್ಲಿದೆ. ಒಂದು ಔತಣದಲ್ಲಿ ನೀನು ಆಹಾರವನ್ನು ತಿನ್ನುವೆ. ಇನ್ನೊಂದರಲ್ಲಿ ನೀನೇ ಆಹಾರವಾಗಿ ತಿನ್ನಲ್ಪಡುವೆ ಈ ಮಹಾಹೋರಾಟದಲ್ಲಿ ಪ್ರತಿಯೊಬ್ಬನಿಗೂ ಇರುವ ಅಪಾಯದ ವಿಭಿನ್ನತೆಯನ್ನು ಊಹಿಸುವುದಕ್ಕೂ ಬಹಳ ಕಷ್ಟವಾಗುತ್ತದೆ. ನಾವು ನಮ್ಮ ನಂಬಿಕೆಯನ್ನು ನಂಬಿಕೆಯಿಂದ ಮಾಡಬೇಕಾದ ಧರ್ಮಪ್ರಚಾರ ಕಾರ್ಯವನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಈ ಊಹೆಯು ನಮಗೆ ಏನನ್ನು ಬೋಧಿಸುತ್ತದೆ?

**ಮಂಗಳವಾರ** **ಮಾರ್ಚ್ 26**

## ಒಂದು ಸಾವಿರ ವರುಷಗಳು (The Millenium)

ಪ್ರಕಟನೆ 20:1–3ನ್ನು ಯೆರೆಮೀಯ 4:23–26 ರ ಜೊತೆಯಾಗಿ ಓದಿರಿ. ಈ ಸಾವಿರ ವರುಷಗಳ ಅವಧಿಯಲ್ಲಿ ಭೂಮಿಯ ಪರಿಸ್ಥಿತಿ ಏನಾಗಿರುತ್ತದೆ? ಆವಾಗ ಸೈತಾನನನ್ನು ಯಾವ ರೀತಿಯಲ್ಲಿ ಸರಪಳಿಯಿಂದ ಬಂಧಿಸಲಾಗುತ್ತದೆ? ಸಾವಿರ ವರುಷಗಳು ಯೇಸುಕ್ರಿಸ್ತನ ಎರಡನೇ ಬರೋಣದಿಂದ ಆರಂಭವಾಗುತ್ತದೆ. ಆವಾಗ ಸೈತಾನನನ್ನು ಮತ್ತು ಆತನ ದೂತರನ್ನು ಸರಪಳಿಗಳಿಂದ ಬಂಧಿಸಲಾಗುತ್ತದೆ. ಸೈತಾನನ ಈ ಬಂಧನವು ಸಾಂಕೇತಿಕವಾದುದು. ಯಾಕೆಂದರೆ ಆತ್ಮೀಕ ಜೀವಿಗಳನ್ನು ದೈಹಿಕವಾಗಿ ಬಂಧಿಸಲಾಗುವುದಿಲ್ಲ.

ಸೈತಾನನು ಸನ್ನಿವೇಶಗಳಿಂದ ಬಂಧಿಸಲ್ಪಡುತ್ತಾನೆ. ಉಪದ್ರವವು ದುಷ್ಟ ಭೂನಿವಾಸಿಗಳನ್ನು ಕೊಲ್ಲುವುದರಿಂದ ಭೂಮಿಯು ಹಾಳು ಬೀಳುತ್ತವೆ ಅಸ್ತವ್ಯಸ್ತ ಪರಿಸ್ಥಿತಿಗೆ ಬರುತ್ತದೆ. ಸೃಷ್ಟಿ ಮಾಡುವುದಕ್ಕೆ ಮುಂಚೆ ಭೂಮಿಯ ಹೇಗೆ ಬರಿದಾಗಿಯೂ ಕ್ರಮವಿಲ್ಲದೆಯೂ ಇದ್ದ ರೀತಿಯಲ್ಲಿ ಇರುತ್ತದೆ (ಆದಿಕಾಂಡ 1:2) ಅಂತಹ ಪರಿಸ್ಥಿತಿಯಲ್ಲಿ ಭೂಮಿಯು ಸಾವಿರ ವರುಷಗಳು ಸೈತಾನನಿಗೆ ಸೆರೆಮನೆಯಂತಾಗಿ ಕಾರ್ಯನಿರ್ವಹಿಸುತ್ತದೆ. ಆವಾಗ ಯಾವ ಮನುಷ್ಯನೂ ಭೂಮಿಯ ಮೇಲೆ ಇರುವುದಿಲ್ಲವಾದುದರಿಂದ ಸೈತಾನನು ಯಾರನ್ನೂ ಮೋಸ ಪಡಿಸಲಾಗುವುದಿಲ್ಲ. ಯಾರಿಗೂ ಹಾನಿ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಅವನು ಮತ್ತು ಅವನ ಸಹವರ್ತಿಗಳೆಲ್ಲರೂ ದೇವರಿಗೆ ಎದುರು ಬಿದ್ದವರಿಗೆ ಆಗುವ ಪರಿಣಾಮಗಳನ್ನು ಅನುಭವಿಸುತ್ತಾ ಇರುತ್ತಾರೆ.

**ಪ್ರಕಟನೆ 20:4–6ನ್ನು ಓದಿರಿ. ಆ ಸಹಸ್ರಮಾನದಲ್ಲಿ ರಕ್ಷಣೆ ಹೊಂದಿದವರು (ವಿಮೋಚಿತರು) ಎಲ್ಲಿರುತ್ತಾರೆ?**

ದೇವಜನರು ಈ ಸಹಸ್ರಮಾನವನ್ನು (ಸಾವಿರ ವರುಷಗಳ) ಕ್ರಿಸ್ತನು ಅವರಿಗೋಸ್ಕರ ಸಿದ್ಧಪಡಿಸಿರುವ ಸ್ಥಳದಲ್ಲಿ ಕಳೆಯುತ್ತಾರೆ (ಯೋಹಾನ 14:1–3ನ್ನು ಓದಿರಿ). ಇವರು ಲೋಕದ ನ್ಯಾಯವಿಚಾರಣೆ ಮಾಡುವವರಾಗಿ ರಾಜರಂತೆ, ಯಾಜಕರಂತೆ ಸಿಂಹಾಸನದ ಮೇಲೆ ಕೂತುಕೊಳ್ಳುವುದನ್ನು ಯೋಹಾನನು

ನೋಡುತ್ತಾನೆ. ಯೇಸುವು ತನ್ನ ಶಿಷ್ಯರಿಗೆ ‘ನೀವು ಹನ್ನೆರಡು ಸಿಂಹಾಸನಗಳಲ್ಲಿ ಕೂತುಕೊಂಡು ಇಸ್ರಾಯೇಲ್ಯರ 12 ಕುಲಗಳಿಗೆ ನ್ಯಾಯತೀರ್ಪು ಮಾಡುವಿರಿ" ಎಂದು ಅವರಿಗೆ ವಾಗ್ದಾನ ಮಾಡುತ್ತಾನೆ" (ಮತ್ತಾಯ 19:28), ದೇವಜನರು ಲೋಕಕ್ಕೆ ನ್ಯಾಯತೀರ್ಪು ಮಾಡುತ್ತಾರೆಂದು ಪೌಲನು ಹೇಳುತ್ತಾನೆ (1 ಕೊರಿಂಥ 6:23). ಈ ನ್ಯಾಯತೀರ್ಪಿನಲ್ಲಿ ದೇವರ ಕೃತ್ಯಗಳು ಎಷ್ಟು ಒಳ್ಳೆಯದಾಗಿವೆ ಎಂಬುದನ್ನು ತಿಳಿಯುತ್ತೇವೆ.

ಸೈತಾನನು ಚರಿತ್ರೆಯಾದ್ಯಂತ ದೇವರ ಗುಣಸ್ವಭಾವದ ಮೇಲೆ ಮತ್ತು ಅವನು ತಾನು ಸೃಷ್ಟಿಸಿದ ಜನರ ಜೊತೆ ಹೇಗೆ ವರ್ತಿಸುತ್ತಾನೆ (ವ್ಯವಹರಿಸುತ್ತಾನೆ) ಎಂಬುದರ ಬಗ್ಗೆ ಸಂದೇಹವನ್ನು ಹುಟ್ಟಿಸುತ್ತಾನೆ. ದೇವರು ರಕ್ಷಣೆ ಪಡೆದುಕೊಂಡವರಿಗೆ (ವಿಮೋಚಿತರಿಗೆ) ಚರಿತ್ರೆಯ ಎಲ್ಲಾ ದಾಖಲಾತಿಗಳನ್ನು ಸಿಗುವಂತೆ ಮಾಡುತ್ತಾನೆ. ಆವಾಗ ಅವರ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ ಮತ್ತು ಕಳೆದು ಹೋದವರ ಮೇಲೆ ಮಾಡುವ ಅವನ ತೀರ್ಪು ಎಷ್ಟು ನ್ಯಾಯ ಉಳ್ಳದ್ದಾಗಿದೆ ಎಂಬುದನ್ನು ಅರಿತುಕೊಳ್ಳುತ್ತಾರೆ.

ಸಹಸ್ರಮಾನದ ಮುಕ್ತಾಯದಲ್ಲಿ ದೇವರನ್ಯಾಯತೀರ್ಪಿನ ವಿಷಯದಲ್ಲಿ ಇರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಗುತ್ತದೆ. ದೇವಜನರಿಗೆ ಸೈತಾನನು ದೇವರ ಮೇಲೆ ಮಾಡಿದ ಆರೋಪಗಳು ಸುಳ್ಳೆಂದು ನಿಸ್ಸಂದೇಹವಾಗಿ ತಿಳಿಯುತ್ತದೆ. ದೇವರು ಹೋದವರ (ನಿತ್ಯಜೀವವನ್ನು ಕಳೆದುಕೊಂಡವರು) ಮೇಲೆ ಮಾಡುವ ನ್ಯಾಯವಿಚಾರಣೆಯಲ್ಲಿ ದೇವರ ತೀರ್ಪು ಜನರ ಮೇಲೆ ಬರುವುದನ್ನು ನೋಡುವುದಕ್ಕೆ ಸಿದ್ಧರಾಗಿರುತ್ತಾರೆ. ಉತ್ತರವೇ ಇಲ್ಲವೆಂಬಂತೆ ತೋರುವ (ಅನಿಸುವ) ಅನೇಕ ಪ್ರಶ್ನೆಗಳಿವೆ. ಅಂತಹ ಪ್ರಶ್ನೆಗಳು ನಮ್ಮಲ್ಲಿ ಯಾರಿಗಿರುವುದಿಲ್ಲ? ಒಂದು ದಿನ ಈ ಪ್ರಶ್ನೆಗಳಿಗೆ ಉತ್ತರ ಕೊಡುವ ದೇವರ ಗುಣಸ್ವಭಾವದ ಬಗ್ಗೆ ಇದು ನಮಗೆ ಏನನ್ನು ಹೇಳುತ್ತದೆ?

**ಬುಧವಾರ** **ಮಾರ್ಚ್ 27**

## ನೂತನ ಆಕಾಶ ನೂತನ ಭೂಮಿ

ಪಾಪವು ಅಂತ್ಯವಾದ ಮೇಲೆ ಭೂಮಿಯು ವಿಮೋಚಿತರಿಗೆ (ರಕ್ಷಣೆ

ಹೊಂದಿದವರಿಗೆ) ಮನೆಯಾಗುತ್ತದೆ. ಇದು ಹೇಗಿರುತ್ತದೆ?

ಪ್ರಕಟನೆ 2:11 ರಲ್ಲಿ ಯೋಹಾನನು ಹೊಸ ಆಕಾಶವನ್ನು ಹೊಸ ಭೂಮಿಯನ್ನು ನೋಡುತ್ತಾನೆ. ಸತ್ಯವೇದವು ಮೂರು ಆಕಾಶಗಳನ್ನು ಪ್ರಸ್ತಾಪಿಸುತ್ತದೆ. ಆಕಾಶ, ನಕ್ಷತ್ರ ಮಂಡಲ ಮತ್ತು ದೇವರ ವಾಸಸ್ಥಳ (2 ಕೊರಿಂಥ 12:2 ನ್ನು ನೋಡಿರಿ). ಪ್ರಕಟನೆ 21:1 ರಲ್ಲಿ ಭೂಮಿಯ ಸುತ್ತವಿರುವ ವಾಯು ಮಂಡಲವನ್ನು ನೋಡುತ್ತೇವೆ. ಮಲಿನವಾದ ಭೂಮಿ ಮತ್ತು ಆಕಾಶವು ದೇವರ ಇರುವಿಕೆಯನ್ನು ಸಹಿಸಲಾರವು (ಪ್ರಕ 20:11). ಗ್ರೀಕ್ ಭಾಷೆಯಲ್ಲಿ ಹೊಸದು ಎಂಬ ಪದಕ್ಕೆ ಕೈನಾಸ್ ಎಂಬ ಪದವಿದೆ. ಇದು ಏನಾದರೊಂದು ವಸ್ತುವು ಗುಣದಲ್ಲಿ ಹೊಸತಾಗಿರುವುದನ್ನು ಸೂಚಿಸುತ್ತದೆ, ಆದರೆ ಹೊಸದಾಗಿ ಹುಟ್ಟುವುದನ್ನು ಮತ್ತೂ ಕಾಲವನ್ನು ಸೂಚಿಸುವುದಿಲ್ಲ. ಇದು ಬೆಂಕಿಯಿಂದ ಶುದ್ಧೀಕರಿಸಲ್ಪಟ್ಟು ತನ್ನ ಮೂಲಸ್ಥಿತಿಗೆ ಹಿಂದಿರುಗುತ್ತದೆ (2 ಪೇತ್ರ 3:10–13).

ಯೋಹಾನನು ಹೊಸಭೂಮಿಯಲ್ಲಿ ಮೊದಲು ನೋಡಿದಾಗ ಆಸಕ್ತಿಕರವಾದ ನಿರ್ದಿಷ್ಟವಾದ ಸಂಗತಿ ಏನೆಂದರೆ ಅದರಲ್ಲಿ ಸಮುದ್ರವೇ ಇಲ್ಲದಿರುವುದು. ಯೋಹಾನನು ಸಮುದ್ರವನ್ನು ಉಲ್ಲೇಖಿಸುವಾಗ ಪ್ರಾಯಶಃ ಅವನು ಇದ್ದ ಪತ್ಮೋಸ್ ದ್ವೀಪವನ್ನು ಸುತ್ತುವರಿದ ಸಮುದ್ರವನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಿದ್ದಾನೆ. ಅದು ಅವನು ಅದರಲ್ಲಿ ಎಲ್ಲರಿಂದ ಬೇರ್ಪಟ್ಟು ಬಾಧೆ ಅನುಭವಿಸಿದುದಕ್ಕೆ ಸಂಕೇತವಾಗಿ ಉಪಯೋಗಿಸಿದ್ದಾನೆ. ನೂತನ ಭೂಮಿಯಲ್ಲಿ ಸಮುದ್ರವಿರುವುದಿಲ್ಲವೆಂದರೆ ಅವನನ್ನು ಪ್ರೀತಿಸುವ ಜನರಿಂದ ಬೇರ್ಪಟ್ಟು ಅನುಭವಿಸಿದ ನೋವು ಅಲ್ಲಿರುವುದಿಲ್ಲ ಎಂಬುದಾಗಿ ಸೂಚಿಸುತ್ತಾನೆ. ಪ್ರಕ 12:2–8 ಮತ್ತು ಪ್ರಕ 7:15–17ನ್ನು ಓದಿರಿ. ಇದು ಆದಿಕಾಂಡ 2ನೇ ಅಧ್ಯಾಯದಲ್ಲಿರುವ ಹೊಸಭೂಮಿಯನ್ನು ಏದೇನ್ ತೋಟವನ್ನು ವರ್ಣಿಸುವಾಗ ಯಾವ ಸಮಾನತೆಗಳು ಇವೆ?

ತಿರುಗಿ ಹೊಸದಾಗಿ ಸ್ಥಾಪಿಸಿದ ಭೂಮಿಯ ಮೇಲೆ ದೇವಜನರ ಜೀವನವು ಕಷ್ಟ ಸಂಕಟಗಳು ಮತ್ತು ಮರಣವಿಲ್ಲದ್ದನ್ನು ಆತನ ಇರುವಿಕೆಯು ಖಾತ್ರಿ ಪಡಿಸುತ್ತದೆ. ಹೊಸ ಯೆರೂಸಲೇಮಿನಲ್ಲಿ ಮತ್ತು ದೇವದರ್ಶನ ಗುಡಾರದಲ್ಲಿ

ದೇವರ ಸಾನಿಧ್ಯವು ತೋರಿಸಲ್ಪಟ್ಟಿದೆ (ಪ್ರಕ 21:3), ಇಲ್ಲಿ ದೇವರು ತನ್ನ ಜನರ ಮಧ್ಯದಲ್ಲಿ ವಾಸಿಸುತ್ತಾನೆ. ದೇವರ ಸಾನಿಧ್ಯವು ಹೊಸದಾಗಿ ಸ್ಥಾಪಿಸಿದ ಭೂಮಿಯ ಮೇಲಿನ ಜೀವಿತವನ್ನು ನಿಜವಾಗಿಯೂ ಸ್ವರ್ಗವನ್ನಾಗಿ (ಪರದೈಸು) ಮಾಡುತ್ತದೆ.

ದೇವರ ಸಾನಿಧ್ಯವು ನಿಶ್ಚಯವಾಗಿ ಕಷ್ಟಸಂಕಟಗಳಿಂದ ಬಿಡುಗಡೆ ಕೊಡುತ್ತದೆ. ಅಲ್ಲಿ ಪಾಪದ ಫಲಗಳಾದ ಮರಣ ದುಃಖ, ಗೋಳಾಟ, ನೋವು, ಸಂಕಟಗಳಿರುವುದಿಲ್ಲ. ಪಾಪವನ್ನು ನಾಶಪಡಿಸಲಾಗಿ ಹಿಂದಿನದೆಲ್ಲವೂ ಇಲ್ಲದಾಗುತ್ತದೆ (ಪ್ರಕ 21:2).

ಲಾದರನು ಸತ್ತಾಗ ಅವನ ಅಕ್ಕಂದಿರಾದ ಮಾರ್ಥ ಮತ್ತು ಮರಿಯಳು ಕ್ರಿಸ್ತನಿಗೆ ಸ್ವಾಮಿ ನೀನು ಇಲ್ಲದಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ ಎಂದು ಹೇಳುತ್ತಾರೆ. ಮರಣವು ಆತನಿರುವಲ್ಲಿ ಇರಲಾರದು ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ (ಯೋಹಾನ 11:21).

ನಾವು ಹೊಸಭೂಮಿಯಲ್ಲಿರುವಾಗ ದೇವರು ನಮ್ಮೊಡನೆ ನೆಲೆಸಿರುತ್ತಾನೆ. ಆದುದರಿಂದ ನಾವು ಈವಾಗ ಅನುಭವಿಸುತ್ತಿರುವ ನೋವು ಸಂಕಟಗಳಿಂದ ಆವಾಗ ಬಿಡುಗಡೆಯಾಗುತ್ತದೆ. ಈ ಬಿಡುಗಡೆಯು ಯೇಸುಕ್ರಿಸ್ತನಲ್ಲಿ ನಮಗಿರುವ ದೊಡ್ಡ ನಿರೀಕ್ಷೆಯಾಗಿದೆ. ಈ ನಿರೀಕ್ಷೆಗೆ ಆತನ ರಕ್ತದಿಂದ ಮುದ್ರೆ ಮಾಡಲ್ಪಟ್ಟಿದೆ. ಹೊಸ ಭೂಮಿಯ ಮೇಲೆ ಹೊಸ ಜೀವನದ ಹೊಸ ಭೂಮಿಯ ಮೇಲೆ ಹೊಸ ಜೀವನದ ಅಸ್ತಿತ್ವದ ವಾಗ್ದಾನವು ನಾವು ನಂಬುವವುಗಳಿಗೆಲ್ಲಾ ಮುಖ್ಯವಾಗಿದೆ ಏಕೆ? ಇದಿಲ್ಲದೆ ನಮ್ಮ ನಂಬಿಕೆ ಎಷ್ಟು ಒಳ್ಳೇದಾಗಿರುತ್ತದೆ?

**ಗುರುವಾರ** **ಮಾರ್ಚ್ 28**

## ಹೊಸ ಯೆರೂಸಲೇಮು

ಯೋಹಾನನು ಹೊಸ ಭೂಮಿಯ ರಾಜಧಾನಿ ಹೊಸ ಯೆರೂಸಲೇಮನ್ನು ವಿವರಿಸುತ್ತಾನೆ. ಇದು ನಿಜವಾದ ಜನರು ವಾಸಿಸುವ ವಾಸ್ತವವಾದ ಸ್ಥಳವಾಗಿರುತ್ತದೆ. ಇಲ್ಲಿನ ಜೀವನ ಲೌಕಿಕ ವಿವರಣೆಗಳಿಗೆ ನಿಲುಕುವುದಿಲ್ಲ (1 ಕೊರಿಂಥ 2:9ನ್ನು ನೋಡಿರಿ).

ಪ್ರಕಟನೆ 21:9–21ನ್ನು ಓದಿರಿ. ಹೊಸ ಯೆರೂಸಲೇಮನ ಹೊರಗಣ ಲಕ್ಷಣಗಳೇನು?

ಹೊಸ ಯರೂಸಲೇಮನ್ನು ಮದಲಗಿತ್ತಿಯೆಂತಲೂ ಯಜ್ಞದ ಕುರಿಯಾದಾತನ ಪತ್ನಿ ಎಂತಲೂ ಸೂಚಿಸುತ್ತದೆ. ಯೇಸುಕ್ರಿಸ್ತನು ತನ್ನ ಜನರಿಗೆ ಸಿದ್ಧಪಡಿಸುತ್ತಿರುವ ಸ್ಥಳವೇ ಹೊಸ ಯೆರೂಸಲೇಮು (ಯೋಹಾನ 14:1–3).

ನಗರವು ದೊಡ್ಡ ಗೋಡೆಯಿಂದ ಸುತ್ತು ವರೆದಿದೆ ಅದಕ್ಕೆ ಹನ್ನೆರಡು ದ್ವಾರಗಳಿವೆ. ಪ್ರತಿಪಾರ್ಶ್ವದಲ್ಲಿ ಮೂರು ದ್ವಾರಗಳಿವೆ. ಯಾವ ಪಾರ್ಶ್ವದಿಂದಾದರೂ ನಗರಕ್ಕೆ ಪ್ರವೇಶಿಸಬಹುದಾಗಿದೆ. ಈ ಲಕ್ಷಣವು ವಿಶ್ವಮಾನ್ಯತೆಯನ್ನು ಸೂಚಿಸುತ್ತದೆ. ಹೊಸ ಯೆರೂಸಲೇಮಿನಲ್ಲಿ ಎಲ್ಲರಿಗೂ ದೇವರ ಸಾನಿಧ್ಯಕ್ಕೆ ಪ್ರವೇಶಿಸುವುದಕ್ಕೆ ಅಪರಿಮಿತವಾದ ಅವಕಾಶಗಳಿರುತ್ತದೆ.

ಮತ್ತು ನಗರವು ಉದ್ದ–ಅಗಲ–ಎತ್ತರ ಹನ್ನೆರಡು ಸಾವಿರ ಮೈಲು ಇರುತ್ತದೆ. ಈ ಚಚ್ಚೌಕವಾದ ನಗರಕ್ಕೆ ಹನ್ನೆರಡು ಬಾಗಿಲುಗಳಿರುತ್ತವೆ. ನಗರ ವಿಸ್ತೀರ್ಣ ಒಟ್ಟು 1,44,000 ಚ.ಮೈಲುಗಳು ಕ್ರಿಸ್ತನ ಎರಡನೇ ಬರೋಣದಲ್ಲಿ ಮರಣವನ್ನು ಅನುಭವಿಸದೆ ನೇರವಾಗಿ ರೂಪಾಂತರ ಹೊಂದಿದ ಒಂದು ಲಕ್ಷದ ನಲ್ವತ್ತು ನಾಲ್ಕು ಸಾವಿರ ಜನರನ್ನು ಸೂಚಿಸುತ್ತದೆ. ಹಳೆ ಒಡಂಬಡಿಕೆಯಲ್ಲಿ ದೇವ ದರ್ಶನ ಗುಡಾರದ ಮಹಾಪರಿಶುದ್ಧ ಸ್ಥಳದಲ್ಲಿ ಇದ್ದ ಮಂಜೂಷ ಪಟ್ಟಿಗೆಯು ಚಚ್ಚೌಕವಾಗಿತ್ತು (1 ಅರಸು 6:20) ಹಾಗಾಗಿ ಹೊಸ ಯೆರೂಸಲೇಮು ದೇವರ ಆರಾಧನೆಯ ಕೇಂದ್ರ ಸ್ಥಳದಂತೆ ನಿರ್ವಹಿಸುತ್ತದೆ.

ಪ್ರಕಟನೆ 21:21 ರಿಂದ 22:5 ರವರೆಗೆ ಓದಿರಿ.

ನಗರದ ಯಾವ ಒಳಂಗಣ ಲಕ್ಷಣಗಳು ಏದೆನ್ ತೋಟವನ್ನು ನೆನಪಿಸುತ್ತವೆ? ಇನ್ನು ಮೇಲೆ ನಗರದಲ್ಲಿ ಶಾಪಗ್ರಸದಿಂದು ಒಂದೂ ಇರುವುದಿಲ್ಲ ಎಂಬುದರ ಮಹತ್ವವೇನು? (ಪ್ರಕ 22:3)?

ಹೊಸ ಯೆರೂಸಲೇಮಿನ ಅತ್ಯಂತ ಪ್ರಮುಖವಾದ ಲಕ್ಷಣ ಯಾವುದೆಂದರೆ ದೇವರ ಸಿಂಹಾಸನದಿಂದ ಹರಿದು ಬರುವ ಜೀವಜಲದ ನದಿ (ಆದಿಕಾಂಡ

2:10ನ್ನು ನೋಡಿರಿ). ಇದು ದೇವಜನರು ಸೆರೆಯಾಳಾಗಳಾಗಿ ಯೆರೂಸಲೇಮಿಗೋಸ್ಕರ ಹಂಬಲಿಸುತ್ತಾ ಬಾಬಲೋನಿನ ನದಿಯ ತೀರದಲ್ಲಿ ಕುಳಿತಿರುವುದಕ್ಕೆ ವ್ಯತಿರಿಕ್ತವಾಗಿದೆ (ಕೀರ್ತನೆ 137), ಹೊಸ ಯೆರೂಸಲೇಮಿನಲ್ಲಿ ಹರಿಯುವ ಜೀವಜಲದ ನದಿಯ ದಡದ ಮೇಲೆ ಅಲೆದಾಡುವ ಎಲ್ಲಾ ದೇವಜನರು ತಮ್ಮ ಮನೆಗಳನ್ನು ಕಂಡುಕೊಳ್ಳುತ್ತಾರೆ.

ನದಿಯ ಇಕ್ಕೆಲಗಳಲ್ಲಿ (ಎರಡು ದಡಗಳು) ಜೀವ ವೃಕ್ಷಗಳಿರುತ್ತದೆ. ಇವುಗಳ ಎಲೆಗಳು ಜನಾಂಗಗಳನ್ನು ವಾಸಿ ಮಾಡುತ್ತವೆ (ಪ್ರಕ 22:2). ವಾಸಿ ಮಾಡುವುದು ಎಂಬುದು ನಿಜವಾಗಿಯೂ ಯಾವುದೇ ರೋಗಗಳಿಗೆ ಸೂಚಿತವಾದುದಲ್ಲ. ಯಾಕೆಂದರೆ ನೂತನ ಭೂಮಿಯಲ್ಲಿ ಯಾವುದೇ ರೋಗವಿರುವುದಿಲ್ಲ. ಇದು ಚರಿತ್ರೆಯಾದ್ಯಾಂತ ಜನರನ್ನು ಬೇರ್ಪಡಿಸುವ ಅಡೆತಡೆಗಳಿಂದ ಆಗಿರುವ ಗಾಯಗಳನ್ನು ಸೂಚಿಸುತ್ತದೆ. ವಿಮೋಚಿತರಾಗಿರುವ ಎಲ್ಲಾ ದೇಶದ ಮತ್ತು ಎಲ್ಲಾ ಯುಗಗಳ ಜನರು ದೇವರ ಒಂದೇ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ.

**ಶುಕ್ರವಾರ** **ಮಾರ್ಚ್ 29**

ಹೆಚ್ಚಿನ ಚಿಂತನೆ : ಎಲೆನ್ ಜಿ ವೈಟಮ್ಮನವರು ಬರೆದ "Christ Object Lessons" ಪುಸ್ತಕದ "Without wedding garment" ಅಧ್ಯಾಯದಲ್ಲಿ ಪುಟ 307 ರಿಂದ 319 ರವರೆಗೆ ಓದಿರಿ. "ಮಹಾಹೋರಾಟ" ಪುಸ್ತಕದ "ಹೋರಾಟ ಮುಗಿಯಿತು" ಅಧ್ಯಾಯದಲ್ಲಿ ಪುಟ 662 ರಿಂದ 678 ರವರೆಗೆ ಓದಿರಿ.

ಪ್ರಕಟನೆಯ ಪುಸ್ತಕವು ಯಾವ ವಿಷಯದಿಂದ ಆರಂಭವಾಯಿತೋ ಅದೇ ವಿಷಯದಿಂದ ಮುಕ್ತಾಯವಾಗುತ್ತದೆ. ಯೇಸುಕ್ರಿಸ್ತನು ಬಲದಿಂದಲೂ ಪ್ರಭಾವದಿಂದಲೂ ಬರುತ್ತಾನೆ ಮತ್ತು ದೇವರ ನಿತ್ಯರಾಜ್ಯವನ್ನು ಸ್ಥಾಪಿಸುತ್ತಾನೆ ಎಂಬುದೇ ಆ ವಿಷಯ ಅಂತಿಮವಾಗಿ ಆತನು ಬಂದು ಸಭೆಯೆಂಬ ಮದಲಗಿತ್ತಿಯೊಡನೆ ಒಂದಾಗುತ್ತಾನೆ ಎಂಬುದು ಈ ಪುಸ್ತಕದಲ್ಲಿ ಬಹಳ ಸಂತಸದ ವಿಷಯವಾಗಿದೆ. ಆದಾಗ್ಯೂ ಪ್ರಕಟನೆ ಪುಸ್ತಕದಲ್ಲಿ ಈ ಘಟನೆಗಳನ್ನು ಅವಾಸ್ತವಿಕವಾಗಿ ಮಂಡಿಸುವುದಿಲ್ಲ. ಈ ಪುಸ್ತಕವು ಎರಡು ವಾಸ್ತವಗಳನ್ನು ಕುರಿತು ಹೇಳುತ್ತದೆ. ಯೇಸುಕ್ರಿಸ್ತನ ಎರಡನೇ ಬರೋಣವು ಮೊದಲನೆಯ

ವಾಸ್ತವವಾದರೆ ಆತನ ಬರೋಣವನ್ನು ಕಾಯುತ್ತಾ ಇನ್ನೂ ಇದ್ದೇವೆ ಇದು ಎರಡನೆ ವಾಸ್ತವತೆ. ನಾವು ಹೀಗೆ ಆತನಿಗಾಗಿ ಕಾಯುತ್ತಿರುವಾಗ ಪ್ರಕಟನೆಯಲ್ಲಿರುವ ಸಂದೇಶವನ್ನು ಚೆನ್ನಾಗಿ ಗ್ರಹಿಸಬೇಕು. ಅದಕ್ಕಾಗಿ ನಾವು ಪ್ರಕಟನೆಯ ಪುಸ್ತಕವನ್ನು ಎಲ್ಲವೂ ಮುಕ್ತಾಯಕ್ಕೆ ಬರುವವರೆಗೂ ಮತ್ತೆ ಮತ್ತೆ ಓದಬೇಕು. ನಾವು ಆತನಿಗೋಸ್ಕರ ಕಾಯುತ್ತಿರುವ ಪ್ರಕಟನೆ ಪುಸ್ತಕದ ಸಂದೇಶವು ನಮ್ಮನ್ನು ಲೋಕದ ವಿಷಯಗಳಿಗೆ ಹಿಂದಿರುಗುವಂತೆ ಮತ್ತು ನಮ್ಮ ನಿರೀಕ್ಷೆಯಾಗಿರುವ ಕ್ರಿಸ್ತನ ಮೇಲೆ ನಾವು ನಮ್ಮ ದೃಷ್ಟಿಯನ್ನು ನೆಡುವುದಕ್ಕೆ ನಮಗೆ ನಿರಂತರವಾಗಿ ನೆನಪಿಸುತ್ತಿರುತ್ತದೆ. ಪ್ರಕಟನೆಯಲ್ಲಿರುವ ಕ್ರಿಸ್ತನು ಮಾನವನ ಎಲ್ಲಾ ನಿರೀಕ್ಷೆಗೂ ಜೀವನದ ಅನಿಶ್ಚತೆ ಮತ್ತು ಒಗಟುಗಳಿಗೂ ಉತ್ತರವಾಗಿದ್ದಾನೆ. ಆತನು ಲೋಕವನ್ನು ಅದರ ಭವಿಷ್ಯವನ್ನು ತನ್ನ ಕೈಗಳಿಂದ ಹಿಡಿದುಕೊಂಡಿದ್ದಾನೆ.

ಅಂತ್ಯವು ಬರುವುದಕ್ಕೆ ಮುಂಚೆ ಆತನ ಬರೋಣದ ಸಂದೇಶವನ್ನು ಸರ್ವಲೋಕಕ್ಕೆ ಸಾರುವ ಜವಾಬ್ದಾರಿಕೆರಿಕೆಯನ್ನು ಪುಸ್ತಕವು ನಮಗೆ ಜ್ಞಾಪಕ ಪಡಿಸುತ್ತದೆ. ಆತನ ಬರೋಣಕ್ಕಾಗಿ ನಾವು ನಿಷ್ಕ್ರಿಯರಾಗಿರದೆ ಸಕ್ರಿಯರಾಗಿ ಕಾಯಬೇಕು. ಆತ್ಮನೂ ಮದಲಗಿತ್ತಿಯೂ 'ಬಾ' ಎನ್ನುತ್ತಾರೆ (ಪ್ರಕ 22:17). ನಾವು ಈ ಕರೆಗೆ ಓಗೊಡಬೇಕು. ಇದು ಒಳ್ಳೆಯ ಸುದ್ದಿಯಾಗಿರಲಾಗಿ ಪ್ರಪಂಚಕ್ಕೆಲ್ಲಾ ಸಾರಸಲ್ಪಡಬೇಕಾಗಿದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಸಹಸ್ರಮಾನವನ್ನು ಕುರಿತು ಮತ್ತು ಸಹಸ್ರಮಾನದ ನಂತರ ಅನೀತಿವಂತರಿಗೆ ಆಗುವ ತೀರ್ಪನ್ನು ಕುರಿತು ಆಲೋಚಿಸಿರಿ. ರಕ್ಷಕಿ ಹೊಂದಿಕೊಂಡವರ ಎಲ್ಲಾ ಪ್ರಶ್ನೆಗಳಿಗೆ ಸಹಸ್ರಮಾನದಲ್ಲಿ ಉತ್ತರ ಸಿಗುತ್ತದೆ. ಅದಾದ ಮೇಲೆಯೇ ದೇವರು ಅನೀತಿವಂತರಿಗೆ ಅಂತಿಮ ಶಿಕ್ಷೆಯನ್ನು ಕೊಡುತ್ತಾನೆ. ಈ ಸತ್ಯವು ದೇವರ ಬಗ್ಗೆ ಏನನ್ನು ಹೇಳುತ್ತದೆ?

2. ಪ್ರಕಟನೆ 1:3 ಈ ಪ್ರವಾದನೆಯನ್ನು ಓದುವವರೆಗೂ ಕೇಳುವವರೆಗೂ ಮತ್ತು ಇದನ್ನು ಕೈಗೊಂಡು ನಡೆಯುವವರಿಗೂ ಆಶೀರ್ವಾದಗಳ

ವಾಗ್ದಾನವನ್ನು ಕೊಡುತ್ತದೆ. ನಾವು ಈ ಪುಸ್ತಕದ ಅಧ್ಯಾಯವನ್ನು ಮುಕ್ತಾಯ ಮಾಡುತ್ತಿರುವಾಗ ನಾವು ಗಮನಿಸಿ ನಡೆದುಕೊಳ್ಳಬೇಕಾಗಿರುವ ಯಾವ ವಿಷಯಗಳನ್ನು ಈ ಪುಸ್ತಕದಲ್ಲಿ ಕಂಡುಕೊಳ್ಳುತ್ತೇವೆ?